# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 29 |
| ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ |
| ಉತ್ತರಿಸುವ ದಿನಾಂಕ | 05.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮುಜರಾಯಿ ಇಲಾಖೆಯ ದೇವಸ್ಥಾನಗಳು ಪ್ರಸ್ತುತ ಎಷ್ಟು ಎಕರೆ ಭೂಮಿಯನ್ನು ಹೊಂದಿದೆ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ 34,564 ಅಧಿಸೂಚಿತ ದೇವಸ್ಥಾನ/ಸಂಸ್ಥೆಗಳಿವೆ. ಜಿಲ್ಲಾಧಿಕಾರಿಗಳ ವರದಿಯನುಸಾರ ದೇವಸ್ಥಾನಗಳು ಪ್ರಸ್ತುತ 36,706 ಎಕರೆ 25 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.<br><br>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳು/ಸಂಸ್ಥೆಗಳ ಬಹುತೇಕ ಜಮೀನುಗಳು ಇನಾಂ ರದ್ದತಿ ಕಾಯ್ದೆ ಮತ್ತು ಭೂ ಸುಧಾರಣೆ ಕಾಯ್ದೆಗಳಡಿಯಲ್ಲಿ ಸರ್ಕಾರದಲ್ಲಿ ವಿಹಿತವಾಗಿರುತ್ತದೆ. ಇನ್ನೂ ಹೆಚ್ಚಿನ ಜಮೀನುಗಳು ಅನೇಕ ಕಾರಣಗಳಿಂದ ಹಲವಾರು ನ್ಯಾಯಾಲಯಗಳಲ್ಲಿ, ಭೂಸುಧಾರಣ ಟ್ರಿಬ್ಯೂನಲ್‌ಗಳಲ್ಲಿ, ಸಿವಿಲ್ ವ್ಯಾಜ್ಯಗಳಲ್ಲಿ, ಭೂಸ್ವಾದೀನ ಪ್ರಕರಣಗಳಲ್ಲಿ, ಖಾಸಗಿ ತಕರಾರುಗಳಲ್ಲಿ ಸಿಲುಕಿರುವುದರಿಂದ ಇತ್ಯರ್ಥವಾಗದೇ, ನಿಖರ ಮಾಹಿತಿ ಪಡೆಯುವುದು ಕಷ್ಟವಾಗಿದೆ. ಆದರೂ ವಿವರಗಳನ್ನು ಸಮನ್ವಯ ಮಾಡಿಕೊಳ್ಳಲಾಗುತ್ತಿದೆ.<br><br>ಈ ರೀತಿ ಸರ್ಕಾರದಲ್ಲಿ ವಿಹಿತವಾಗಿರುವ ಜಮೀನುಗಳನ್ನು ಹೊರತುಪಡಿಸಿ, ದೇವಾಲಯಕ್ಕೆ ಸೇರಿದ ಉಳಿದೆಲ್ಲ ಜಮೀನುಗಳನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿಯೇ ಖಾತೆ/ಪಹಣಿ ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>2023 ಮತ್ತು 2024ನೇ ಸಾಲಿನ ಅಂತ್ಯದ ವರೆಗೆ 11,498 ಎಕರೆ ಆಸ್ತಿಗಳನ್ನು ದೇವಾಲಯದ ಹೆಸರಿಗೆ ಪಹಣಿಯಲ್ಲಿ ಇಂಡೀಕರಿಸಲಾಗಿದ್ದು, ಒಟ್ಟಾರೆ ಸುಮಾರು **15,413 ಎಕರೆ** ಆಸ್ತಿಗಳನ್ನು ದೇವಾಲಯಗಳ ಹೆಸರಿಗೆ ಪಹಣಿಯಲ್ಲಿ ಇಂಡೀಕರಣ ಮಾಡಲಾಗಿರುತ್ತದೆ.<br><br>ಬಾಕಿ ಉಳಿದ ಆಸ್ತಿಗಳನ್ನು ಒಂದು ವರ್ಷದೊಳಗೆ ಪಹಣಿಯಲ್ಲಿ ಇಂಡೀಕರಣ ಮಾಡುವಂತೆ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ ಆಯುಕ್ತರು, ನಗರ ಪಾಲಿಕೆ ಗಳವರಿಗೆ ನಿರ್ದೇಶನ ನೀಡಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಭೂ ಸುಧಾರಣಾ ಕಾಯ್ದೆಯ ಅನ್ವಯ ಉಳುವವನೇ ಹೊಲದೊಡೆಯ ಎಂಬ ಕಾನೂನು ಬರುವ ಮೊದಲು ಮುಜರಾಯಿ ದೇವಸ್ಥಾನಗಳು ಹೊಂದಿದ್ದ ಭೂಮಿ ಎಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಜಾರಿಯಾಗುವ ಪೂರ್ವದಲ್ಲಿಯೇ ಮೈಸೂರು (ಧಾರ್ಮಿಕ ಮತ್ತು ಧರ್ಮಾರ್ಥ) ಇನಾಂ ಜಮೀನುಗಳ ರದ್ದತಿ ಕಾಯ್ದೆ 1955ರ ಕಾಯ್ದೆಯು ಜಾರಿಯಾದ ಕಾರಣ ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳ/ ಧಾರ್ಮಿಕ ಸಂಸ್ಥೆಗಳ ಬಹುತೇಕ ಇನಾಂ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಕಾರಣದಿಂದ ಭೂ ಸುಧಾರಣಾ ಕಾಯ್ದೆಯನ್ವಯ ಉಳುವವನೇ ಹೊಲದೊಡೆಯ ಎಂಬ ಕಾನೂನು ಬರುವ ಮೊದಲು ಮುಜರಾಯಿ ದೇವಸ್ಥಾನಗಳು ಹೊಂದಿದ್ದ ಭೂಮಿಗಳ ನಿಖರವಾದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ. |
| ಇ) | ಪ್ರಸ್ತುತ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ದೇವಸ್ಥಾನದ ಭೂಮಿಯಲ್ಲಿ ಯಾವ ಯಾವ ರೀತಿಯ ಶಾಶ್ವತ ನಿರ್ಮಾಣಗಳನ್ನು ಮಾಡ ಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಸ್ತುತ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ದೇವಸ್ಥಾನದ ಭೂಮಿಯಲ್ಲಿ ಭಕ್ತಾಧಿಗಳ ಅನುಕೂಲ ಕ್ಕಾಗಿ ಮೂಲಭೂತ ಸೌಕರ್ಯಗಳಾದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ, ಕಲ್ಯಾಣಮಂಟಪ, ಅನ್ನ ದಾಸೋಹ ಭವನ, ಶೌಚಾಲಯ, ಅತಿಥಿಗೃಹ, ಯಾತ್ರಿನಿವಾಸ, ಅಂಗಡಿ/ಮಳಿಗೆಗಳು ಸಮುದಾಯ ಭವನ ಇವೇ ಮೊದಲಾದ ಶಾಶ್ವತ ನಿರ್ಮಾಣಗಳನ್ನು ಮಾಡಲಾಗಿರುತ್ತದೆ. **ಮಾಹಿತಿಯನ್ನು ಸಿ.ಡಿ ರೂಪದಲ್ಲಿ ಒದಗಿಸಿದೆ.** |
| ಈ) | ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸ ಲಾಗುತ್ತಿದೆಯೇ? (ಶಿಕ್ಷಣ ಸಂಸ್ಥೆಯ ಹೆಸರಿನೊಂದಿಗೆ ಜಿಲ್ಲಾವಾರು ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಈ ಕೆಳಕಂಡ ಅಧಿಸೂಚಿತ ಸಂಸ್ಥೆಗಳ ವತಿಯಿಂದ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸಲಾಗುತ್ತಿದೆ:-<br>1. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯ, ಬೈಂದೂರು ತಾಲ್ಲೂಕು ಉಡುಪಿ ಜಿಲ್ಲೆ<br>2. ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮಂದಾರ್ತಿ, ಉಡುಪಿ ತಾಲ್ಲೂಕು<br>3. ಬ್ರಾಹ್ಮೀ ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಕಮಲಶಿಲೆ, ಕುಂದಾಪುರ ತಾಲ್ಲೂಕು.<br>4. ಶ್ರೀ ಅನಂತಪದ್ಮನಾಭ ದೇವಾಲಯ ಪೆರ್ಡೂರು, ಉಡುಪಿ ತಾಲ್ಲೂಕು<br>5. ಕುಕ್ಕೆ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ, ಕಡಬ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.<br>6. ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಕಟೀಲು, ದಕ್ಷಿಣ ಕನ್ನಡ ಜಿಲ್ಲೆ.<br>7. ಯಡೆಯೂರು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ದೇವಾಲಯ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.<br>(ಜಿಲ್ಲಾವಾರು ವಿವರಗಳನ್ನು **ಅನುಬಂಧ -2 ರಲ್ಲಿ** ಒದಗಿಸಿದೆ). |

ಸಂಖ್ಯೆ: ಕಂಇ 9 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು.

# ಮುಜರಾಯಿ ದೇವಾಲಯಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಮುಜರಾಯಿದೇವಾಲಯಗಳಸಂಖ್ಯೆ A | B | C | ಒಟ್ಟು ದೇವಾಲಯಗಳ ಸಂಖ್ಯೆ | ದೇವಾಲಯ ಆಸ್ತಿಗಳ ಒಟ್ಟು ವಿಸ್ತೀರ್ಣ A | | B | | C | | ಒಟ್ಟು | |
|---|---|---|---|---|---|---|---|---|---|---|---|---|---|
| | | | | | | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎ | ಗು |
| 1 | ಬೆಂಗಳೂರು ನಗರ | 21 | 16 | 1067 | **1104** | 114 | 10.5 | 59 | 18.3 | 432 | 19.5 | 606 | 8.25 |
| 2 | ಬೆಂಗಳೂರು ಗ್ರಾಮಾಂತರ | 3 | 5 | 1132 | **1140** | 82 | 0.5 | 69 | 32.5 | 298 | 29 | 450 | 22 |
| 3 | ರಾಮನಗರ | 7 | 5 | 855 | **867** | 118 | 12.5 | 25 | 17 | 843 | 25 | 987 | 4.5 |
| 4 | ಚಿಕ್ಕಬಳ್ಳಾಪುರ | 3 | 4 | 1065 | **1072** | 32 | 13 | 196 | 16 | 973 | 10.25 | 1201 | 39.25 |
| 5 | ತುಮಕೂರು | 9 | 10 | 2442 | **2461** | 118 | 13.5 | 119 | 28.5 | 4068 | 28.5 | 4306 | 30.5 |
| 6 | ಕೋಲಾರ | 6 | 7 | 1315 | **1328** | 39 | 14.3 | 254 | 0.75 | 1098 | 24.25 | 1391 | 39.25 |
| 7 | ಚಿತ್ರದುರ್ಗ | 4 | 4 | 297 | **305** | 160 | 2 | 9 | 12 | 890 | 39 | 1060 | 13 |
| 8 | ಶಿವಮೊಗ್ಗ | 4 | 2 | 637 | **643** | 289 | 29 | 3 | 20 | 898 | 34 | 1192 | 3 |
| 9 | ದಾವಣಗೆರೆ | 2 | 8 | 611 | **621** | 0 | 8.25 | 51 | 9.25 | 249 | 38.75 | 301 | 16.25 |
| 10 | ಮೈಸೂರು | 6 | 4 | 1301 | **1311** | 87 | 2.25 | 376 | 5 | 1119 | 39 | 1583 | 6.25 |
| 11 | ಮಂಡ್ಯ | 9 | 13 | 2099 | **2121** | 81 | 28.5 | 33 | 0 | 2292 | 17.5 | 2407 | 6 |
| 12 | ದಕ್ಷಿಣ ಕನ್ನಡ | 45 | 35 | 415 | **495** | 848 | 26 | 57 | 12.3 | 366 | 94 | 1274 | 12.3 |
| 13 | ಚಿಕ್ಕ ಮಗಳೂರು | 3 | 9 | 868 | **880** | 26 | 29.3 | 0 | 0 | 680 | 38 | 707 | 27.25 |
| 14 | ಚಾಮರಾಜನಗರ | 2 | 1 | 411 | **414** | 98 | 22.3 | 5 | 12.5 | 396 | 28 | 500 | 22.75 |
| 15 | ಕೊಡಗು | 3 | | 4 | **7** | 343 | 3.5 | 0 | 0 | 312 | 17 | 655 | 20.5 |
| 16 | ಹಾಸನ | 6 | 6 | 2444 | **2456** | 27 | 31 | 92 | 20.5 | 2256 | 21.25 | 2376 | 32.75 |
| 17 | ಉಡುಪಿ | 25 | 9 | 775 | **809** | 234 | 12 | 14 | 24 | 462 | 20 | 711 | 16 |
| 18 | ಗುಲ್ಬರ್ಗಾ | 4 | 2 | 1624 | **1630** | 172 | 36.3 | 0 | 0 | 1374 | 27 | 1547 | 23.25 |
| 19 | ಯಾದಗಿರಿ | 2 | 3 | 1207 | **1212** | 35 | 3 | 9 | 37 | 473 | 32.5 | 518 | 32.5 |
| 20 | ಬಳ್ಳಾರಿ | 4 | 4 | 653 | **661** | 3 | 2.5 | 4 | 22 | 853 | 35 | 861 | 19.5 |
| 21 | ವಿಜಯನಗರ | 10 | 7 | 621 | **638** | 469 | 3.25 | 606 | 25 | 2598 | 1.5 | 3673 | 29.75 |
| 22 | ರಾಯಚೂರು | 4 | 1 | 1282 | **1287** | 1044 | 21 | 5 | 6 | 202 | 14 | 1252 | 1 |
| 23 | ಕೊಪ್ಪಳ | 3 | 0 | 736 | **739** | 72 | 16 | 6 | 0 | 462 | 25 | 541 | 1 |
| 24 | ಬೀದರ್ | 7 | 3 | 520 | **530** | 142 | 7 | 49 | 18 | 334 | 22 | 526 | 7 |
| 25 | ಬೆಳಗಾವಿ | 5 | 6 | 3795 | **3806** | 1820 | 21.8 | 2 | 7 | 1534 | 10 | 3356 | 38.75 |
| 26 | ಬಾಗಲಕೋಟೆ | | 2 | 1164 | **1166** | 0 | 0 | 2 | 33 | 407 | 0.25 | 409 | 33.25 |
| 27 | ಉತ್ತರ ಕನ್ನಡ | 9 | 8 | 684 | **701** | 38 | 10.5 | 90 | 11.8 | 370 | 29 | 499 | 11.25 |
| 28 | ಹಾವೇರಿ | 1 | 11 | 1279 | **1291** | 2 | 38 | 7 | 14 | 735 | 37 | 746 | 9 |
| 29 | ವಿಜಯಪುರ | | 1 | 550 | **551** | 0 | 0 | 4 | 0 | 142 | 11.5 | 146 | 11.5 |
| 30 | ಗದಗ್ | | | 1388 | **1388** | 0 | 0 | 0 | 0 | 762 | 4 | 762 | 4 |
| 31 | ಧಾರವಾಡ | | | 930 | **930** | 0 | 0 | 0 | 0 | 150 | 4 | 150 | 4 |
| | | **207** | **186** | **34171** | **34564** | | | | | | | **36693** | **545.55** |
| | | | | | | | | | | | | **36706** | **25.55** |

ಅನುಬಂಧ - 2

ಅನುಬಂಧ

ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿರುವ ಅಧಿಸೂಚಿತ ಸಂಸ್ಥೆಗಳ ಆಧೀನಕ್ಕೊಳಪಟ್ಟ ಶಿಕ್ಷಣ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ಶಿಕ್ಷಣ ಸಂಸ್ಥೆ ಹೆಸರು | ಷರಾ |
|---|---|---|
| | ***ಉಡುಪಿ ಜಿಲ್ಲೆ*** | |
| **ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯ, ಬೈಂದೂರು ತಾಲ್ಲೂಕು** | | |
| 1 | ಕೊಲ್ಲೂರು ಶ್ರೀ ಮೂಕಾಂಬಿಕಾ ಪ್ರೌಢಶಾಲೆ, | |
| 2 | ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಪ್ರೌಢಶಾಲೆ, ಅರೆಶೀರೂರು, | |
| 3 | ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಪ್ರೌಢಶಾಲೆ, ಹೊಸೂರು, | |
| 4 | ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಪ್ರೌಢಶಾಲೆ, ಮಾವಿನಕಟ್ಟೆ, | |
| 5 | ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಪ್ರೌಢಶಾಲೆ, ಕೊಡ್ಲಾಡಿ, | |
| 6 | ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಪ್ರೌಢಶಾಲೆ, ಬೀಸಿನಪಾರೆ, | |
| 7 | ಶ್ರೀ ಮೂಕಾಂಬಿಕಾ ಸ್ವತಂತ್ರ ಪದವಿಪೂರ್ವ ಕಾಲೇಜು | |
| **ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮಂದಾರ್ತಿ, ಉಡುಪಿ ತಾಲ್ಲೂಕು** | | |
| 8 | ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಪದವಿ ಪೂರ್ವ ಕಾಲೇಜು, ಮಂದಾರ್ತಿ | |
| 9 | ಶ್ರೀ ದುರ್ಗಾಪರಮೇಶ್ವರಿ ದೇವಾಲಯದ ಪ್ರೌಢಶಾಲೆ, ಮಂದಾರ್ತಿ | |
| **ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಾಲಯ ಕಮಲಶಿಲೆ ಕುಂದಾಪುರ ತಾಲ್ಲೂಕು** | | |
| 10 | ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ಪ್ರೌಢಶಾಲೆ, ಕಮಲಶಿಲೆ | |
| **ಪೆರ್ಡೂರು ಶ್ರೀ ಅನಂತಪದ್ಮನಾಭ ದೇವಾಲಯ, ಉಡಡುಪಿ ತಾಲ್ಲೂಕು** | | |
| 1 | ಶ್ರೀ ಅನಂತ ಪದ್ಮನಾಭ ಪ್ರಾಥಮಿಕ ಶಾಲೆ ಉಡುಪಿ ತಾಲ್ಲೂಕು | |
| | ***ದಕ್ಷಿಣ ಕನ್ನಡ ಜಿಲ್ಲೆ*** | |
| **ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಾಲಯ, ಶ್ರೀ ಕ್ಷೇತ್ರ ಕುಕ್ಕೆ ಶ್ರೀ ಸುಬ್ರಹ್ಮಣ್ಯ, ಕಡಬ ತಾಲ್ಲೂಕು** | | |
| 1 | ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾ ವಿದ್ಯಾಲಯ, ಸುಬ್ರಹ್ಮಣ್ಯ | |
| 2 | ಶ್ರೀ ಸುಬ್ರಹ್ಮಣ್ಯೇಶ್ವರ ಪ್ರೌಢಶಾಲೆ ಸುಬ್ರಹ್ಮಣ್ಯ | |
| | ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜು | |
| **ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಕಟೀಲು, ದಕ್ಷಿಣ ಕನ್ನಡ ಜಿಲ್ಲೆ** | | |
| 1 | ಶ್ರೀ ದುರ್ಗಾ ಪರಮೇಶ್ವರಿ ಪದವಿ ಪೂರ್ವ ಕಾಲೇಜು, ಕಟೀಲು | |
| | ***ತುಮಕೂರು ಜಿಲ್ಲೆ*** | |
| **ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ದೇವಾಲಯ ಎಡೆಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ** | | |
| 1 | ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಪದವಿ ಪೂರ್ವ ಕಾಲೇಜು ಎಡೆಯೂರು | |
| 2 | ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಪ್ರೌಢಶಾಲೆ ಎಡೆಯೂರು | |
| 3 | ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆ | |

K. P...